DC-44
7-2-2

No KRVN 12 ಶ 17-3-75

in ★ ★ ★ ★ ★
58 th Year
ನೇ ವರ್ಷ

ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

ಸತ್ಯವಾದಿ
SATYAVADI

Golden Jubilee Celebrated Paper
Satyavadi Daily
Mysore 4
- For Influential Publicity -

ಸ್ವಾಮಿಗಳು: ಅರಮನೆ ಸಿರಸ್ತೇದಾರ್ ಎಂ. ವಿ. ಕುಮಾರಾವ್ ಸಂಪಾದಕರು ಧರ್ಮಸ್ವಾಮಾರನಿರತ ಎಂ. ಎಸ್. ಕೃಷ್ಣರಾವ್ [3 ಪೈಸೆ

ಮಂತ್ರಿ ಕಷ್ಣರ ಮೇಲಿನ ಆಪಾದನೆ ನೆತವಲ್ಲ

ಗಾಂಧಿನಗರದ ಹೆರಿಗೆ ಕೇಂದ್ರಕ್ಕೆ ಕೊಡುಗೆ

ಮಂಗಳೂರು ಉತ್ತರ ರೋಟರಿ ಕ್ಲಬ್‌ನವರು ಪುರಸಭೆಗೆ ಉದಾರ -ಕೊಡುಗೆ ಯಾಗಿತ್ತ ಹೆರಿಗೆ ಕೇಂದ್ರದಲ್ಲಿ ಈಚೆಗೆ 318 ರೋಟರಿ ಜಿಲ್ಲಾ ಗೌರ್ನರ್ ರೊ | ಡಾ | ಪಿ ಆರ್. ಸೀತಾರಾಂರವರ ಅಧ್ಯಕ್ಷತೆಯಲ್ಲಿ ನಡೆದ ಸರಳ ಸಮಾರಂಭದಲ್ಲಿ ಹೆರಿಗೆ ಕೇಂದ್ರಕ್ಕೆ ಮಣಿಪಾಲ್ ಸಹೋದರರು ಒದಗಿಸಿ ಕೊಟ್ಟ ಉದಾರ ಕೊಡುಗೆಗಳನ್ನು ಗೌರ್ನರರ ಹಸ್ತದಿಂದ ಕೇಂದ್ರಕ್ಕೆ ಹಸ್ತಾಂತರಿಸಲಾಯಿತು. ಇನ್ನರ್‌ವೀಲ್ ಅಧ್ಯಕ್ಷೆ ಶ್ರೀಮತಿ ಹೇಮಲತಾ ಪಿ. ಬಾಳಿಗರವರು ಗೋಡೆ ಗಡಿಯಾರವೊಂದನ್ನು ಕೇಂದ್ರಕ್ಕೆ ದಾನವಾಗಿ ನೀಡಿದರು.

●

ವಿದುರ ನೀತಿ

ದುರ್ಬಲನು ಬಲವಂತನ (ದೈವಬಲ) ಮೇಲೆ ಛಲ ತೊಟ್ಟವನಿಗೂ, ಕಾಮ ಪೀಡಿತನಿಗೂ, ಹನಾರ್ಜನೆ ಮಾಡು ಕಡುಲೋಭಿಗೂ, ಕ್ಲೇಶದಿಂದ ಜೀವಿಸುವವನಿಗೂ, ದೇವರ ನೆಲೆಯನ್ನರಿಯಬೇಕೆಂಬ ಕಾತುರತೆ ಇರುವವನಿಗೂ ರಾತ್ರಿ ವೇಳೆ ನಿದ್ರೆ ಬಾರದು.

ವುಡ್‌ಲಾಂಡ್ 14 3 75 ರಿಂದ
ಅಮೋಘ 3 ನೇ ವಾರ
ದಾರಿ ತಪ್ಪಿದ ಮಗ
ಅಪೂರ್ವ ಕನ್ನಡ ಕಲಾಕೃತಿ ಪಾತ್ರ– ರಾಜಕುಮಾರ್ (ದ್ವಿಪಾತ್ರದಲ್ಲಿ)
ವಜ್ರಮುನಿ, ಅಶ್ವತ್, ಬಾಲಕೃಷ್ಣ, ಕಲ್ಪನ, ಆರತಿ ದಿನ 3 ಪ್ರದರ್ಶನಗಳು

ಅಪೇರಾ 14 3 75 ರಿಂದ
ಪಣಕೋಟಿ
★
ಅಮೋಘ ತಮಿಳು ಚಿತ್ರ
ಹೊಸ ಕಾಪಿ ದಿನ 3 ಪ್ರದರ್ಶನಗಳು

ಸಕ್ಕರೆ ಉತ್ಪಾದನೆ

ಈ ವರ್ಷ ಸಕ್ಕರೆ ಉತ್ಪಾದನೆ 45 ಅಥವಾ 46 ಲಕ್ಷ ಟನ್‌ಗಳಷ್ಟು ಆಗುವ ದಿದೆ ಎಂದು ನವದೆಹಲಿ ವಾರ್ತೆ ಹಿಂದೆ ಯಾವಾಗಲೂ ಆಗದ ದಾಖಲೆ ಇದು

★

ಮೆನನ್ ಮಾತು

ಕಂಸೆನಿ ಕಾಯಿದೆ ಮಂಡಲಿಯ ಜಂಟಿ ಕಾರ್ಯದರ್ಶಿ ಶ್ರೀ ಪಿ. ಬಿ ಮೆನನ್‌ರರು ಬೆಂಗಳೂರಿನಲ್ಲಿ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕೆ ಸಂಸ್ಥೆಗಳ ಸಂಘದಲ್ಲಿ ಭಾಷಣ ಮಾಡುತ್ತಾ, ಸಾಮಾಜಿಕ, ಆರ್ಥಿಕ ನ್ಯಾಯ ಮತ್ತು ಜನತೆಯ ಹಿತ ದೃಷ್ಟಿ, ಕಂಪೆನಿ ಕಾನೂನಿನ ತಿದ್ದುಪಡಿಯ ಉದ್ದೇಶ ಅದುದರಿಂದ ಅದರ ಮೇಲೆ ವೃಥಾ ಟೀಕೆ ಸಲ್ಲದೆಂದು ತಿಳಿಸಿದರು.

●

ನಿರಾಕರಣೆ

ಪಾಕೀಸ್ತಾನದ ಪ್ರಧಾನಿ ಭುಟ್ಟೋರವರು ಇಸ್ಲಾಮಾಬಾದಿನಲ್ಲಿ ಮಾತನಾಡುತ್ತಾ, ಅಯುಬ್ ಶರಬರಾಜು ನಿರ್ಬಂಧ ರದ್ದು ಪಡಿಸಿರುವದಕ್ಕೆ ಬದಲಾಗಿ, ಅಮೆರಿಕಕ್ಕೆ ಪಾಕೀಸ್ತಾನ ಸೇನೆ ನೆಲೆ ಸ್ಥಾಪಿಸುವದಕ್ಕೆ ಅನುಮತಿ ನೀಡಿದೆ ಎಂಬುದನ್ನು ನಿರಾಕರಣೆ ಮಾಡಿದರು.

●

ಪ್ರತಿಭಟನೆ ಪತ್ರ

ಪಾಕೀಸ್ತಾನದ ಪ್ರಧಾನಿ ಭುಟ್ಟೋರವರು ಕಾಶ್ಮೀರ ಒಡಂಬಡಿಕೆ ಪ್ರತಿಭಟಿಸಿ, ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರಿಗೆ ಪತ್ರ ಬರೆದಿರುವರೆಂದು ವರದಿಯಾಗಿದೆ.

★

ಚಳುವಳಿ ಬಗ್ಗೆ ಖಂಡನೆ

ಕಮ್ಯೂನಿಸ್ಟ್ ಪಕ್ಷದ ಬೆಂಗಳೂರು ಜಿಲ್ಲಾ ಶಾಖೆಯು ಇತ್ತೀಚೆಗೆ ಕರ್ನಾಟಕವನ್ನು ಅಂಗೀಕರಿಸಿ, ಜಗಳಗಾರರ ಚಳುವಳಿ ಖಂಡಿಸಿದೆ

ಸಕ್ಕರೆ ಉತ್ಪಾದನೆ

ಕೈಗಾರಿಕೆ ಮಂತ್ರಿ ಶ್ರೀ ಎಸ್ ಎಂ ಕೃಷ್ಣರವರ ಮೇಲೆ ಮಾಡಿರುವ ಅಧಿಕಾರ ದುರುಪಯೋಗ ಹಾಗೂ ಸ್ವಜನ ಪಕ್ಷಪಾತ ಆರೋಪ ಸತ್ಯಾಂಶಕ್ಕೆ ದೂರವಾದುದು ಎಂದು ಮಂಡ್ಯ ಜಿಲ್ಲೆ ಯುವಜನ ವೃಂದಕ್ಕೆ ಸೇರಿದ ಹದಿನಾಲ್ಕು ಮಂದಿ ಹೇಳಿಕೆ ಇತ್ತಿದ್ದಾರೆ

★

ಭಾರತೀಯ ಸಂಗೀತ ಕಲಿಯಿರಿ

ಕಲಾವಿದೆ ರುಕ್ಮಿಣಿದೇವಿ ಅರುಂಡೇಲ್ ರವರು ಬೆಂಗಳೂರಿನಲ್ಲಿ ಮಾತನಾಡುತ್ತಾ, ಪಾಶ್ಚಾತ್ಯ ಲಘು ಸಂಗೀತದ ಆಸೆ ತ್ಯಜಿಸಿ ಭಾರತೀಯ ಸಂಗೀತ ಕಲಿಯಬೇಕೆಂದು ಕರೆ ನೀಡಿದರು.

★

ಪಂಚಾಯಿತಿ ಮಂಡಲಿ ಕಾರ್ಯ

ಮಾರ್ಚ್ 17 ರ ಬದಲು ಮೇ 27 ರಿಂದ 30 ರ ವರೆಗೆ ಕರ್ನಾಟಕ ರಿವಿನ್ಯೂ ನ್ಯಾಯ ಪಂಚಾಯಿತಿ ಮಂಡಲಿ ಬೆಳಗಾವಿಯಲ್ಲಿ ಸೇರುತ್ತದೆ.

★

ತಿವಿತ ಪ್ರಕರಣ

ಸುಮಾರು ಒಂದೂವರೆ ತಿಂಗಳು ಕೆಳಗೆ ಮಾದುವೆ ಆಗಿದ್ದ ಬೆಂಗಳೂರು ಹನುಮಂತನಗರದ ನಿವಾಸಿ ಚನ್ನಂಕಯ್ಯನು ತನ್ನ ಪತ್ನಿ ಶೀಲದ ಬಗ್ಗೆ ಶಂಕೆಸಿ ಚಾಕುವಿನಿಂದ ಗಾಯಗೊಳಿಸಿ ತಾನೂ ತಿವಿದುಕೊಂಡ ನೇದು ವರದಿಯಾಗಿದೆ.

○

ಬಂಧನ

ಬೆಂಗಳೂರುನಗರದ ಪೋಲೀಸರು ಓರ್ವ ಸ್ಮಗ್ಲಿಕ್ಸಿ ಡ್ರೈವರನು ಮತ್ತಿತರ 5 ಮಂದಿ [illegible] ಬಂಧಿಸಿದ್ದಾರೆ. ನೋಟುಗಳನ್ನು [illegible] ಮಾಡುವ ಆಶೆ ತೋರಿಸಿ ವಂಚಿಸಿದ ಆಪಾದನೆ ಇವರ ಮೇಲೆ ಇದೆ.

(ಮಹಾಭಾರತದಲ್ಲಿನ) ನಾರೀರತ್ನಗಳು

★

ಜೀವಿಯ ಮುದ್ದೆ (ತೆಜ ಏವ ತು ಕೇವಲಂ) ದ್ರೌಪದಿ, ವೀರಮಾತೆ ಕುಂತಿ, ಪತಿಪರಾಯಣೆ ಗಾಂಧಾರಿ, ಮಗನನ್ನು ಯುದ್ಧಕ್ಕೆ ಹುರಿದುಂಬಿಸುವ ವಿದುಲೆ, ವೀರಪತಿವ್ರತೆ ಸಾವಿತ್ರಿ, ಕವ್ಯಪರಂಪರೆಯನ್ನು ಜಯಿಸಿದ ದಮಯಂತಿ ನೂರಾರು ನಾರೀರತ್ನಗಳು ಮಹಾಭಾರತದಲ್ಲಿ ಅಲಂಕಾರಪ್ರಾಯರಾಗಿದ್ದಾರೆ. ಭಾರತೀಯ ಸಂಸ್ಕೃತಿಯ ಉದಾತ್ತ ಆದರ್ಶಗಳನ್ನು – ಶುಷ್ಕ ಉಪದೇಶದಿಂದಲ್ಲ – ಸ್ವಯಂ ಆಚರಿಸಿ ತೋರಿಸಿದ "ಆಚಾರ್ಯ" ರವರು. ಅವರು ಬೆಳಗಿಸಿದ ಆದರ್ಶ ಜ್ಯೋತಿಯು ಭಾರತೀಯ ಮಹಿಳೆಯರ ಹೃದಯವನ್ನು ಇಂದಿಗೂ ಬೆಳಗಿಸುತ್ತಿದೆ ಮಾನವತೆಯ ಉತ್ಕರ್ಷಕ್ಕಾಗಿ ಉದಾತ್ತ ಭಾವನೆಗಳನ್ನು ಬೆಳಗಿಸಿದ ಮಹಾಭಾರತದ ಮಹಿಳೆಯರನ್ನು ಹಿಂದಿನ ಮತ್ತು ಇಂದಿನ ವಿಶ್ವದ ವಿದ್ವಾಂಸರೆಲ್ಲರೂ ಹಾಡಿ ಕೊಂಡಾಡಿದ್ದಾರೆ. ಭಾರತದ ಇಂದಿನ ಹಾಗೂ ಮುಂದಿನ ಪ್ರಜೆಗಳು ಮಹಾಭಾರತದ ಮಹಿಳೆಯರ ಋಣದಿಂದ ಮುಕ್ತರಾಗಬೇಕಿದ್ದರೆ ಅವರು ಹಾಕಿಕೊಟ್ಟ ಆದರ್ಶಗಳನ್ನು ಮನಸಾರೆ ಅನುಸರಿಸಬೇಕು. ಮಹಾಭಾರತದ ಮಹಿಳೆಯರು ವಿಶ್ವದ ಜನತೆಗೆ ಎಂದೆಂದಿಗೂ ಮಾರ್ಗದರ್ಶಕರಾಗಿ ನಿಲ್ಲುತ್ತಾರೆ. ಯದ್ಯಪಿ ಇಂದಿನ ಹಾಗೂ ಮುಂದಿನ ಯುಗಗಳಲ್ಲಿ ಮಹಿಳೆಯ ಕಾರ್ಯಕ್ಷೇತ್ರಗಳು ಮಹಾಭಾರತ ಕಾಲದ ಮಹಿಳೆಯರ ಕಾರ್ಯಕ್ಷೇತ್ರಗಳಿಂದ ಭಿನ್ನವಾದವು ಅವರ ಆಶೆ-ಆಕಾಂಕ್ಷೆಗಳಿಗಿಂತ ಇವರ ಆಶೋತ್ತರಗಳು ಬೇರೆ; ಆದರೂ ಭಾರತೀಯ ಸಂಸ್ಕೃತಿಯ ಸಂವಾಹಕವಾದ ಅಂತಃಸತ್ವಗಳಲ್ಲಿ ಅಂದಿಗೂ ಇಂದಿಗೂ ಅಂಶತಃ ಆದರೂ ಸಾಮ್ಯವಿದ್ದುದರಿಂದ ಅಂದಿನವರ ಆದರ್ಶಗಳು ಇಂದಿನವರಿಗೆ, ಹಾಗೂ ಮುಂದಿನವರಿಗೂ ಕೂಡ ಸ್ಫೂರ್ತಿಯನ್ನೊದಗಿಸಬಲ್ಲವು. ತೆರ ಬದಲಾಗಿದೆ, ಬಣ್ಣ ಹೊಸದು; ಚಿತ್ರ–ಚಿತ್ರದ ಹಿನ್ನೆಲೆ ಮಾತ್ರ ಅದೇ! ಇತ್ಥಂ ಚ ಇಂದು-ಮುಂದೂ ಕೂಡ ಭಾರತೀಯ ಮಹಿಳೆಯರಿಗೆ ತಮ್ಮ ಚರಿತ್ರೆಯನ್ನು ತೂಪಿಸಿಕೊಳ್ಳುವುದರಲ್ಲಿ ಮಹಾಭಾರತದ ಮಹಿಳೆಯರ ಚರಿತ್ರಾನುಶೀಲನವು ತುಂಬಾ ಸಹಾಯಕವಾದೀತು. ಮಹಾಭಾರತವು ಭಾರತೀಯ ಸಂಸ್ಕೃತಿಯ ಆಧಾರಸ್ತಂಭವಾದರೆ ಅದರಲ್ಲಿನ ನಾರೀರತ್ನಗಳು ಮಹಾಭಾರತಕ್ಕೇ ಆಧಾರಸ್ತಂಭವೆನಿಸಿವೆ. — ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ

Protect the Cow

Silver Jubilee of Gorakshana

When Journals devoted to the pious and noble cause of cow-protection, kindness to animals, ahimsa, etc., are very few and dharmic papres are short-lived, it is rejoicing that the 'Gorakshana' will be eelebrating its uniqe Silver jubilee early and in a befitting manner. Donations and Messages from philanthropic, Gomata-interested humanitarian persons are fervently solicited, and this act of kindness will be gratefully acknowledged and ever remembered.

Editor 'Gorakshana" Chamarajapuam, Mysore 4

ಭಾರತದಲ್ಲಿ ಗೋವಧೆ ಪೂರ್ಣ ನಿಶೇಧವಾಗಲಿ

SHAKTI SUDHA

A Superb Tonic

Quality Printing Neat Binding

Lakshminarasimha Press

Sivarampet Mysore 1

Help The Gorakshana

—Humanitarian Propoganda Monthly....

Edited Printed and Published by Dharmapracharanirata M S. Krishna Rao (Prop. ...) the Satyavadi Press, Chamarajapuram Mysore